**ದಿನಾಂಕ 30-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 3 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಸಮಯದಲ್ಲಿ ನಾನು ಸಂತೆಗೆ ಹೋಗಿ ರಸ್ತೆಯಲ್ಲಿ ಎಡಬದಿಯಲ್ಲಿ ಗಾಡಿಯ ಬಳಿ ಬಂದು ನಿಂತಿದ್ದೆ . ನಾನು ರಸ್ತೆಯಲ್ಲಿ ನಿಂತಿರಲಿಲ್ಲ ರಸ್ತೆಯಿಂದ ಮಣಿನ ರಸ್ತೆ ಇರುವ 5 ಅಡಿ ದೂರದಲ್ಲಿ ನಿಂತಿದ್ದೆ . ಅಪಘಾತದ ಪೂರ್ವದಲ್ಲಿ ನಾನು ಕಾರನ್ನು ನೋಡಿಲ್ಲ . ಆ ಸಮಯದಲ್ಲಿ ನಾನು ಒಬ್ಬನೇ ಇದ್ದೆ . ಅಪಘಾತಪಡಿಸಿದೆ ಎನ್ನಲಾದ ವಾಹನ ದಕ್ಷಿಣದ ಕಡೆಯಿಂದ ಬರುತಿತ್ತು . ಅಪಘಾತಕ್ಕೆ ಕಾರು ಚಾಲಕನ ಯಾವುದೇ ನಿರ್ಲಕ್ಷತನ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಆಗುವಾಗ ಸಮಯದಲ್ಲಿ ಬೇರೆ ವಾಹನ ಇದ್ದಬಗ್ಗೆ ನಾನು ನೋಡಿಲ್ಲ . ಕಾರಿನ ಎಡಭಾಗ ನನಗೆ ಡಿಕ್ಕಿಪಡಿಸಿರುತ್ತದೆ . ನಾನು ಹೈಟೆಕ್ ಆಸ್ಪತ್ರೆ ಯಲ್ಲಿ ದಾಖಲಾಗಿರುತ್ತೇನೆ . ನಾನು ಹಾಜರುಪಡಿಸಿದನಿಪಿ 12 ರಲ್ಲಿ ಕಾಣುವ ಅಂಗನ್ಯೂನತೆ ನನಗೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಆದ ಎಲ್ಲಾ ಗಾಯಗಳು ಗುಣಮುಖವಾಗಿದೆ ಎಂದರೆ ಸರಿ. ಆಸ್ಪತ್ರೆಯಲ್ಲಿ ಎಲ್ಲಾ ಚಿಕಿತ್ಸೆ ಮುಗಿದನಂತರವೇ ನನ್ನನ್ನು ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಅಪಘಾತದಿಂದ ನನ್ನ ಭವಿಷ್ಯ ಜೀವನಕ್ಕೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಈಗ ನನಗೆ ಚಿಕಿತ್ಸೆ ಬಾಕಿ ಇಲ್ಲ ಎಂದರೆ ಸರಿ, ಆದರೇ ನೋವು ಇರುತ್ತದೆ .

ಅಪಘಾತದ ಸಮಯದಲ್ಲಿ ನಾನು ಇನ್ಸುರೆನ್ಸ್ ನಲ್ಲಿ ಕೆಲಸ ಮಾಡುತಿದ್ದೆ . ನನಗೆ ಆ ಸಮಯದಲ್ಲಿ ತಿಂಗಳಿಗೆ ರೂ 50,000/- ಸಂಪಾದನೆ ಇತ್ತು. ನಿಪಿ-14 ರಲ್ಲಿ ಕಾಣುವಷ್ಟು ನನಗೆ ಸಂಪಾದನೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-14 ನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಲ್ತ್ ಇನ್ಸುರೆನ್ಸ್ ನಿಂದ ನಾನು ಖರ್ಚು ಮಾಡಿದ ಹಣ ಸಂಪೂರ್ಣ ಬಂದಿದೆ ಎಂದರೆ ಸರಿಯಲ್ಲ, ಸ್ವಲ್ಪ ಬಂದಿದೆ . ನಾನು ಹಾಜರುಪಡಿಸಿರುವ ಬಿಲ್ಲುಗಳು ಮುಖ್ಯ ಒಳಬಿಲ್ಲಿನ ಜೊತೆಯಲ್ಲಿ ಸೇರಿದೆ ಎಂದರೆ ಸರಿಯಲ್ಲ. ನಿಪಿ 14 ನ್ನು ಬಿಟ್ಟು ನಾನು ಸಂಪಾದನೆ ಮಾಡುತಿದ್ದ ಬಗ್ಗೆ ಬೇರೆ ದಾಖಲೆ ಇಲ್ಲ ಎಂದರೆ ಸರಿ. ಐಟಿ ರಿಟನ್ಸ್ ಗಳು ಇರುತ್ತದೆ ಆದರೇ ಹಾಜರುಪಡಿಸಿಲ್ಲ . ನಾನು ಹಾಜರುಪಡಿಸಿರುವ ನಿಪಿ 9 ಒಳರೋಗಿ ಬಿಲ್ಲು ಜೆರಾಕ್ಸ್

ಆಗಿದ್ದು ಅದಕ್ಕೆ ವೈದ್ಯರು ಮಾತ್ರ ಸಹಿ ಮಾಡಿದ್ದು ಆಸ್ಪತ್ರೆ ಯ ಸಹಿ ಇಲ್ಲ ಎಂದರೆ ಸಾಕ್ಷಿ ಅದನ್ನು ಹೆಲ್ತ್ ಇನ್ಸುರೆನ್ಸ್ ಗೆ ಕಳುಹಿಸಿರುತ್ತೇವೆ ಎಂದು ತಿಳಿಸಿರುತಾರೆ . ನಾನು ಹಾಜರುಪಡಿಸಿರುವಷ್ಟು ಹಣ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು, ಪೌಷ್ಟಿಕ ಆಹಾರಕ್ಕೆ, ಓಡಾಟಕ್ಕೆ, ಪರಿಚಾರಕರಿಗೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ನಿರ್ಲಕ್ಷ್ಯತನದಿಂದ ಆಗಿದ್ದು, 3 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಎಷ್ಟು ಹಣ ಇನ್ಸುರೆನ್ಸ್ ನಿಂದ ಪಡೆದಿದ್ದೇನೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹಾಜರುಪಡಿಸಿದ್ದೇನೆ. ಸಾರ್ವಜನಿಕ ರಸ್ತೆಯ ಮೇಲೆ ಹೋಗುವ ವಾಹನವನ್ನು ಗಮನಿಸದೇ ನಾವು ನಮ್ಮ ವಾಹನವನ್ನು ನಿಲ್ಲಿಸಿದ್ದರಿಂದ ನಮ್ಮ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ಪರಿಹಾರದ ಅರ್ಜಿ ಕಾಲಮಿತಿ ಬಾದಿತದಿಂದ ಕೂಡಿರುವುದರಿಂದ ನಾನು ಪರಿಹಾರ ಪಡೆಯಲು ಬಾದ್ಯಸ್ಥನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.